## ಉತ್ಸಾಹದಿಂದ ಭಾಗವಹಿಸಿದ ವಿದ್ಯಾರ್ಥಿಗಳು

# ಶಾಲಾ-ಕಾಲೇಜುಗಳಲ್ಲಿ ಯೋಗ ಪ್ರದರ್ಶನ

ವಿಜಯವಾಣಿ ಸುದ್ದಿಜಾಲ ಕೋಲಾರ

ತಾಲೂಕಾದ್ಯಂತ ಶಾಲಾ ಕಾಲೇಜುಗಳಲ್ಲಿ ಯೋಗ ಪ್ರದರ್ಶನದೊಂದಿಗೆ ಗುರುವಾರ ವಿಶ್ವ ಯೋಗ ದಿನ ಆಚರಿಸಲಾಯಿತು. ನಗರದ ಸಹ್ಯಾದ್ರಿ ಪದವಿ ಕಾಲೇಜಿನಲ್ಲಿ ನಡೆದ ಯೋಗ ದಿನಾಚರಣೆಯಲ್ಲಿ ಪ್ರಾಂಶುಪಾಲ ಪ್ರೊ. ಎಂ ಕೃಷ್ಣಪ್ಪ, ಉಪ ಪ್ರಾಂಶುಪಾಲ ಬಿ.ಬದರಿನಾಥ್ ಹಾಗೂ ಉಪನ್ಯಾಸಕರು ಪಾಲ್ಗೊಂಡಿದ್ದರು.

**ತೋಟಗಾರಿಕೆ ಕಾಲೇಜು:** ತೋಟಗಾರಿಕೆ ಮಹಾವಿದ್ಯಾಲಯದ ಸಭಾಂಗಣದಲ್ಲಿ ದೇವರಾಜ ಅರಸು ಮೆಡಿಕಲ್ ಕಾಲೇಜಿನ ಸಹಯೋಗದೊಂದಿಗೆ ಆಯೋಜಹಿಸಿದ್ದ ಯೋಗ ದಿನಾಚರಣೆಯಲ್ಲಿ ಇಂಟಿಗ್ರೇಟಿವ್ ಮೆಡಿಸಿನ್ ಮುಖ್ಯಸ್ಥ ಡಾ.ನಿತಿನ್ ಪಾಟೀಲ್ ಯೋಗದಿಂದಾಗುವ ಪ್ರಯೋಜನಗಳ ಕುರಿತು ಮಾಹಿತಿ ನೀಡಿದರು. ತೋಟಗಾರಿಕೆ ಕಾಲೇಜಿನ ಡೀನ್ ಡಾ.ಬಿ.ಜಿ.ಪ್ರಕಾಶ್, ವೈದ್ಯಕೀಯ ಮಹಾವಿದ್ಯಾಲಯದ ಡಾ.ಧನಶ್ರೀ, ಸುನೀತಾ, ತೋಟಗಾರಿಕೆ ಮಹಾವಿದ್ಯಾಲಯದ ಉಪನ್ಯಾಸಕರಾದ ಡಾ.ರಾಜೀವ್, ಎಚ್.ಎನ್. ವರಲಕ್ಷ್ಮೀ, ಭವ್ಯಾ ಇದ್ದರು.



ವಿಜಯವಾಣಿ

ಕೋಲಾರ ನಗರದ ಸಹ್ಯಾದ್ರಿ ಪದವಿ ಕಾಲೇಜಿನಲ್ಲಿ ಯೋಗ ಪ್ರದರ್ಶನ ನಡೆಯಿತು.

**ಕಾರಂಜಿಕಟ್ಟೆ ಎಇಎಸ್ ಶಾಲೆ:** ಕಾರಂಜಿಕಟ್ಟೆ ಎಇಎಸ್ ಶಾಲೆ ಆವರಣದಲ್ಲಿ ನಡೆದ ಯೋಗ ದಿನವನ್ನು ಮುಖ್ಯಶಿಕ್ಷಕಿ ಪಿ.ಸಂಧ್ಯಾ ಉದ್ಘಾಟಿಸಿದರು. ಕಾರ್ಯದರ್ಶಿ ಎನ್.ಪಾಲ್ಗುಣ, ಶಿಕ್ಷಕರಾದ ಚಂದ್ರ ಮೋಹನ್, ಪಿ.ಶ್ರಾವಣಿ, ಎಸ್. ಲಕ್ಷ್ಮೀದೇವಿ, ಕೆ.ಮಂಜುಳಾ ಇದ್ದರು.

**ಹರಟಿ ಸರ್ಕಾರಿ ಶಾಲೆ:** ಹರಟಿ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಣ ಸಂಯೋಜಕ ರಮಣಪ್ಪ ಯೋಗ ಪ್ರಾತ್ಯಕ್ಷಿಕೆ ನೀಡಿದರು. ಮುಖ್ಯಶಿಕ್ಷಕ ಜಿ.ಶ್ರೀನಿವಾಸ್, ದೈಹಿಕ ಶಿಕ್ಷಣ ಶಿಕ್ಷಕ ಎಂ.ಕೃಷ್ಣಪ್ಪ, ಸಹ ಶಿಕ್ಷಕರಾದ ಪಿ.ಎಂ. ಗೋವಿಂದಪ್ಪ, ಎಂ.ಆರ್.ಮೀನಾ, ಆರ್. ಮಂಜುಳಾ, ಎಚ್. ಮುನಿಯಪ್ಪ, ಕೆ.ಮಮತಾ ಮತ್ತಿತರರು ಇದ್ದರು

**ಕುಂಬಾರಹಳ್ಳಿ ಪಬ್ಲಿಕ್ ಶಾಲೆ:** ಕುಂಬಾರಹಳ್ಳಿ ಬಳಿಯಿರುವ ಸಿ.ಮುನಿಸ್ವಾಮಿ ಪಬ್ಲಿಕ್ ಶಾಲೆಯಲ್ಲಿ ಪತಂಜಲಿ ಯೋಗ ಶಿಕ್ಷಣ ಸಮಿತಿ ಸದಸ್ಯರಾದ ರಾಜಪ್ಪ ರೆಡ್ಡಿ, ರಮೇಶ್, ವೆಂಕಟೇಶ್ ವಿದ್ಯಾರ್ಥಿಗಳಿಗೆ ಯೋಗಾಸನ ತಿಳಿಸಿದರು. ಶಾಲೆಯ ಅಧ್ಯಕ್ಷೆ ಮಂಗಮ್ಮ ಮುನಿಸ್ವಾಮಿ, ಕಾರ್ಯದರ್ಶಿ ಮಲ್ಲೇಶ್ ಬಾಬು, ಪ್ರಾಂಶುಪಾಲ ಎಂ.ಜಿ.ಸುರೇಶ್ ಇದ್ದರು.